## ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಸುನೀಲಗೌಡ ಬಿ.ಪಾಟೀಲ ರವರ ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.

### -:: ವಿಷಯ ::-

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪುರಸಭೆಯಲ್ಲಿ ಅವ್ಯವಹಾರಗಳು ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ. ಪುರಸಭೆಯ ಆಡಳಿತ ಮಂಡಳಿಯ ಸಲಹೆಗಳನ್ನು ತೆಗೆದುಕೊಳ್ಳಲಾಗುತ್ತಿಲ್ಲ ಹಾಗೂ ಸಕಾರಣಗಳಿಲ್ಲದೆ ಕ್ರಿಯಾ ಯೋಜನೆಯನ್ನು ಬದಲಾವಣೆ ಮಾಡಲಾಗಿದೆ. ಇದಕ್ಕೆ ಆಡಳಿತ ಮಂಡಳಿಯ ಅಥವಾ ಸಾಮಾನ್ಯ ಸಭೆಯ ಒಪ್ಪಿಗೆಯನ್ನು ಪಡೆದಿರುವುದಿಲ್ಲ. ಅನುದಾನಗಳ ಬಳಕೆಯ ಮಾರ್ಗಸೂಚಿಗಳ ಪಾಲನೆಯಾಗುತ್ತಿಲ್ಲ ಮತ್ತು ಈ ಪುರಸಭೆಯಲ್ಲಿ ಆಗಿರುವ ಅವ್ಯವಹಾರಗಳ ಕುರಿತು ಜಿಲ್ಲಾಧಿಕಾರಿಗಳು ವಿಜಯಪುರ ಇವರು ಸರ್ಕಾರಕ್ಕೆ ವರದಿ ನೀಡಿದ್ದು, ಈ ವರದಿಯ ಮೇಲೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವಂತೆ ಅಗ್ರಹಿಸಿ ಹಾಗೂ ಸದರಿ ಪುರಸಭೆಯಲ್ಲಿ ಆಡಳಿತ ವೈಫಲ್ಯದಿಂದ ಉಂಟಾದ ಗಂಭೀರ ಸಮಸ್ಯೆಗಳ ಕುರಿತು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

### -:: ಉತ್ತರ-::-

ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ರವರು ಮುದ್ದೇಬಿಹಾಳ ಪುರಸಭೆಯ ಮುಖ್ಯಾಧಿಕಾರಿ ಶ್ರೀಮತಿ ಸುರೇಖಾ ಶಿವಪುತ್ರ ಬಾಗಲಕೋಟ (ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು) ಇವರ ವಿರುದ್ಧದ ಸಾರ್ವಜನಿಕ ದೂರು ಮನವಿಯ ಅಂಶಗಳ ಕುರಿತು ಪರಿಶೀಲನೆಗಾಗಿ ಅಧಿಕಾರಿಗಳ ತನಿಖಾ ತಂಡವನ್ನು ನಿಯೋಜಿಸಿ, ವರದಿಯನ್ನು ಪಡೆದಿರುತ್ತಾರೆ. ತನಿಖಾ ತಂಡ ಕೆಳಕಂಡ 04 ಅಂಶಗಳಲ್ಲಿ ಮುಖ್ಯಾಧಿಕಾರಿಗಳು ಕರ್ತವ್ಯಲೋಪ ಎಸಗಿದ್ದಾರೆಂದು ವರದಿ ಮಾಡಿರುವುದನ್ನು ಉಲ್ಲೇಖಿಸಿ, ಇವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

1. ಶ್ರೀಮತಿ ಸುರೇಖಾ ಶಿವಪುತ್ರ ಬಾಗಲಕೋಟ ಇವರು ಹೆಚ್ಚುವರಿಯಾಗಿ ನಾಲತವಾಡ ಪಟ್ಟಣ ಪಂಚಾಯಿತಿಯಲ್ಲಿ ಮುಖ್ಯಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡು ಕೆಲಸ ನಿರ್ವಹಿಸುತ್ತಿರುವುದರಿಂದ ನಗರದ ಸಮಸ್ಯೆಗಳಿಗೆ ಸ್ಪಂಧಿಸಲು ಆಗಿರುವುದಿಲ್ಲ. ಕೇಂದ್ರ ಸ್ಥಾನದಲ್ಲಿ ಕೆಲಸ ನಿರ್ವಹಿಸಬೇಕಾಗಿದ್ದು, ದಿ:17.07.2022 ರಿಂದ ಪಟ್ಟಣದಲ್ಲಿ ವಾಸ್ತವ್ಯ ಮಾಡುತ್ತಿದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 12 ರಿಂದ 16 ನ್ನು (ಕೇಂದ್ರ ಸ್ಥಾನದಲ್ಲಿ ವಾಸವಿಲ್ಲದಿರುವ ಬಗ್ಗೆ) ಉಲ್ಲಂಘಿಸಿರುತ್ತಾರೆ.
2. ಶ್ರೀಮತಿ ಸುರೇಖಾ ಶಿವಪುತ್ರ ಬಾಗಲಕೋಟ ರವರು ಶ್ರೀ.ಸುರೇಶ.ಕೆ.ಶೆಟ್ಟಿ ಇವರ ಮೂಲಕ ವಾಹನ ಬಾಡಿಗೆ ಪಡೆದಿರುವ ದಾಖಲಾತಿಗಳನ್ನು ವಿಚಾರಣೆಗೆ ಹಾಜರುಪಡಿಸಿಲ್ಲ. ಸದರಿ ಗುತ್ತಿಗೆದಾರರು ಇವರ ಪತಿಯಿದ್ದು, ಒಂದೇ ಕಂತಿನಲ್ಲಿ ಇವರಿಗೆ ಚೆಕ್ ಸಂ.021599 ರ ಮೂಲಕ ರೂ.2,75,000/-ಗಳನ್ನು ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಸಂದಾಯ ಮಾಡಿರುತ್ತಾರೆ.

..2

C-44

3. ಜಿಲ್ಲಾಧಿಕಾರಿಗಳ ಕಛೇರಿಯಿಂದ ದಿನಾಂಕ:24.12.2020 ರಂದು ಒಟ್ಟು 92 ಮಳಿಗೆಗಳ ಬಹಿರಂಗ ಹರಾಜು ಅನುಮೋದನೆಯಾಗಿದ್ದು, ಮುಖ್ಯಾಧಿಕಾರಿಗಳು 22 ಮಳಿಗೆಗಳನ್ನು ಬಹಿರಂಗ ಹರಾಜು ಮಾಡಿರುತ್ತಾರೆ. ಈ ಪೈಕಿ 14 ಮಳಿಗೆಗಳನ್ನು ಲೀಸ್‌ದಾರರಿಗೆ ನೋಂದಣಿ ಮಾಡಿ ಹಂಚಿಕೆ ಮಾಡಿರುತ್ತಾರೆ. ಆದರೆ ಲೀಸ್‌ದಾರರಿಗೆ ಹಂಚಿಕೆ ಮಾಡುವ ಮುನ್ನ ಜಿಲ್ಲಾಧಿಕಾರಿಗಳ ಕಛೇರಿಯಿಂದ ಅನುಮೋದನೆ ಪಡೆದಿರುವುದಿಲ್ಲ. ಹರಾಜು ಷರತ್ತಿನ **Right of First Refusal** ಬಗ್ಗೆ ವಿವರಣೆ ನೀಡಿರುವುದಿಲ್ಲ.

4. ಕಾನೂನು ಬಾಹಿರವಾಗಿ ಸಾರ್ವಜನಿಕ ಜಾಗಗಳನ್ನು 02 ಸಂಸ್ಥೆಗಳಿಗೆ ನೋಂದಣಿ ಮೂಲಕ ಬಾಡಿಗೆಗೆ ನೀಡಿರುವ ಸಮಯದಲ್ಲಿ ಉಪನೋಂದಣಾಧಿಕಾರಿಗಳ 1957 ರ ಮುದ್ರಾಂಕ ಶುಲ್ಕ ಕಾಯ್ದೆಯನ್ವಯ ನಿವೇಶನ ಬೆಲೆಯ ಮೇಲೆ ಬಾಡಿಗೆಯನ್ನು ನಿಗದಿಪಡಿಸಿರುವುದಿಲ್ಲ. ನಗರ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕರಿಂದ ಜಾಗದ ಮಂಜೂರಿ ಬಗ್ಗೆ ಅಭಿಪ್ರಾಯ ಪಡೆದಿರುವುದಿಲ್ಲ. ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 01 ಟಿಎಂಡಿ 2018, ದಿ:30.01.2018ರ ಷರತ್ತುಗಳಂತೆ ನಿವೇಶನ ಮಂಜೂರು ಮಾಡಿರುವುದಿಲ್ಲ. ಮುಖ್ಯಾಧಿಕಾರಿಗಳು ಉಪನೋಂದಣಾಧಿಕಾರಿಗಳಿಗೆ ಜಾಗದ ನೋಂದಣಿ ರದ್ದುಪಡಿಸಲು ಪತ್ರ ಬರೆದಿದ್ದು, ತದನಂತರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರು ಸಲ್ಲಿಸಿರುವ ವರದಿಯಲ್ಲಿ ಮುಖ್ಯಾಧಿಕಾರಿಗಳ ವಿರುದ್ಧದ ಕರ್ತವ್ಯಲೋಪಗಳು ಮೇಲ್ನೋಟಕ್ಕೆ ಕಂಡು ಬಂದಿದ್ದು, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿರುವುದನ್ನು ಅನುಮೋದಿಸಿ ಮುದ್ದೇಬಿಹಾಳ ಪುರಸಭೆ ಮುಖ್ಯಾಧಿಕಾರಿ ಶ್ರೀಮತಿ ಸುರೇಖಾ ಶಿವಪುತ್ರ ಬಾಗಲಕೋಟ ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ ದಿನಾಂಕ:07.09.2022 ರಿಂದ ಅನ್ವಯವಾಗುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ದಿನಾಂಕ :07.09.2022ರಲ್ಲಿ ಪೌರಾಡಳಿತ ನಿರ್ದೇಶನಾಲಯದಿಂದ ಆದೇಶ ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ).

ಶ್ರೀಮತಿ ಸುರೇಖಾ ಶಿವಪುತ್ರ ಬಾಗಲಕೋಟ (ಮೂಲ ಹುದ್ದೆ ಕಛೇರಿ ವ್ಯವಸ್ಥಾಪಕರು) ಇವರ ವಿರುದ್ಧದ ಆರೋಪಗಳ ಕುರಿತು ದೋಷಾರೋಪಣಾ ಪಟ್ಟಿ ಅನುಬಂಧ–1 ರಿಂದ 4 ಅನ್ನು ಸಿದ್ದಪಡಿಸಿ ಅನುಬಂಧ–3ರ ದಾಖಲಾತಿಗಳ ಸಹಿತ ಜರೂರಾಗಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ ಜಿಲ್ಲೆ ರವರಿಗೆ ಸೂಚಿಸಲಾಗಿರುತ್ತದೆ. ದೋಷಾರೋಪಣೆ ಸ್ವೀಕೃತಗೊಂಡ ನಂತರ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಂಖ್ಯೆ:ನಅಇ 06 ಎಲ್‌ಸಿಕ್ಯೂ 2022

(ಎನ್.ನಾಗರಾಜು ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ
ವಲಯ ಉದ್ಯಮಗಳ ಸಚಿವರು.